### ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದಿಂದ ಆಯೋಜನೆ

# ಶಾಲಾ ವಿದ್ಯಾರ್ಥಿಗಳಿಗೆ ಯೋಗ ತರಬೇತಿ

**ಹಳಿಯಾಳ:** ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯವು ಪ್ರಾಥಮಿಕ ಶಾಲಾ ಮಕ್ಕಳಿಗೆ ಯೋಗಭ್ಯಾಸದ ಮಹತ್ವ ತಿಳಿಸುವ ಮತ್ತು ವಿವಿಧ ಆಸನಗಳ ತರಬೇತಿ ಕಾರ್ಯಕ್ರಮವನ್ನು ಜೂನ್ 18ರಂದು ಹಮ್ಮಿಕೊಂಡಿತ್ತು.

ಹಳಿಯಾಳ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಾದ ಅಜಗಾಂವ್ ಮತ್ತು ಕೆಸರೊಳ್ಳಿ ವಿದ್ಯಾರ್ಥಿಗಳಿಗೆ ಯೋಗಾಭ್ಯಾಸದ ಮಹತ್ವ ಹಾಗೂ ಉಪಯೋಗವನ್ನು ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ನಿಯಮಿತವಾಗಿ ಯೋಗ ಅಭ್ಯಾಸ ಮಾಡುವುದರಿಂದ ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಸುವುದು ಎಂದು ಹೇಳಿದರು. ಶೈಕ್ಷಣಿಕ ವಿಭಾಗದ ಡೀನ್ ಡಾ. ಗುರುರಾಜ ಹತ್ತಿ ಸೂರ್ಯ ನಮಸ್ಕಾರದ ಮಹತ್ವವನ್ನು ತಿಳಿಸಿದರು.

ಗದಿಗಪ್ಪ ಎಳ್ಳೂರ್ ಮತ್ತು ಸುನೀಲ ಯರಗಟ್ಟಿ ವಿದ್ಯಾರ್ಥಿಗಳಿಗೆ ಸೂರ್ಯ ನಮಸ್ಕಾರ, ಪದ್ಮಾಸನ, ಸರ್ವಾಂಗಾಸನದ ತರಬೇತಿ ನೀಡಿದರು.

ವಿದ್ಯಾರ್ಥಿಗಳಿಗೆ ಯೋಗಭ್ಯಾಸದ ಮಹತ್ವ ತಿಳಿಸಿ, ತರಬೇತಿ ನೀಡಿದ ವಿಡಿಐಟಿ ಮಹಾವಿದ್ಯಾಲಯಕ್ಕೆ ತಮ್ಮ ಶಾಲೆಯು ಆಭಾರಿಯಾಗಿದೆ ಎಂದು ಕೆಸರೊಳ್ಳಿ ಶಾಲೆಯ ಮುಖ್ಯೋಪಾಧ್ಯಾಪಕಿ ಪ್ರವೀಣಾ ಪಟ್ಟಣಕರ್ ಹೇಳಿದರು.

ಶಾಲಾ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಹಾಗೂ ಸೃಜನಶೀಲತೆಯ ಅನಾವರಣಕ್ಕೆ ಅಜಗಾವ್ ಮತ್ತು ಕೆಸರೊಳ್ಳಿಯ ಶಾಲಾ ವಿದ್ಯಾರ್ಥಿಗಳಿಗೆ 400ಕ್ಕೂ ಅಧಿಕ



ಡ್ರಾಯಿಂಗ್ ಶೀಟ್‌ಗಳನ್ನು ಮಹಾವಿದ್ಯಾಲಯದ ವತಿಯಿಂದ ಇದೇ ಸಂದರ್ಭದಲ್ಲಿ ವಿತರಿಸಲಾಯಿತು.

ಹಿರಿಯ ಪ್ರಾಥಮಿಕ ಶಾಲೆ ಹಾವಗಿ, ಕೆರವಾಡ ಮತ್ತು ಮುರ್ಕವಾಡದ ಚೈತನ್ಯ ವಿದ್ಯಾಲಯದ ಮಕ್ಕಳಿಗೆ ಮುಂಬರುವ ದಿನಗಳಲ್ಲಿ ಯೋಗ ತರಬೇತಿ ಮತ್ತು ಡ್ರಾಯಿಂಗ್ ಶೀಟ್‌ಗಳನ್ನು ಮಹಾವಿದ್ಯಾಲಯವು ವಿತರಿಸಲಿದೆ.

ಈ ಕಾರ್ಯಕ್ರಮವನ್ನು ಉನ್ನತ ಭಾರತ ಅಭಿಯಾನದ ಸಂಚಾಲಕ ಪ್ರೊ. ರಾಕೇಶ್ ಪಾಟೀಲ್ ಮತ್ತು ಡಾ. ಶಂಕರ್ ಬಡಿಗೇರ್ ಸಂಯೋಜಿಸಿದ್ದರು.

ಶಾಲಾ ವಿದ್ಯಾರ್ಥಿಗಳಲ್ಲಿ ಯೋಗಭ್ಯಾಸದ ಅರಿವು ಮೂಡಿಸಿ, ಅವರ ಕಲಿಕಾ ಸಾಮರ್ಥ್ಯವನ್ನು ಅಧಿಕಗೊಳಿಸಲು ಮಹಾವಿದ್ಯಾಲಯವು ಈ ಉಪಕ್ರಮವನ್ನು ಕೈಗೊಂಡಿದೆ ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಲಾ ವಿದ್ಯಾರ್ಥಿಗಳಿಗೆ ಯೋಗ ತರಬೇತಿ

ನುಡಿಜೇನು ವರದಿ

**ಹಳಿಯಾಳ:** ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪಟ್ಟಣದ ಕೆಎಲ್ಎಸ್‌ವಿಡಿಐಟಿ ಮಹಾವಿದ್ಯಾಲಯವು ಪ್ರಾಥಮಿಕ ಶಾಲಾ ಮಕ್ಕಳಿಗೆ ಯೋಗಭ್ಯಾಸದ ಮಹತ್ವ ತಿಳಿಸುವ ಮತ್ತು ವಿವಿಧ ಆಸನಗಳ ತರಬೇತಿ ಕಾರ್ಯಕ್ರಮವನ್ನು ಬುಧವಾರ ಹಮ್ಮಿಕೊಂಡಿತ್ತು. ಹಳಿಯಾಳ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಾದ ಅಜಗಾಂವ್ ಮತ್ತು ಕೆಸರೊಳ್ಳಿ ವಿದ್ಯಾರ್ಥಿಗಳಿಗೆ ಯೋಗಾಭ್ಯಾಸದ ಮಹತ್ವ ಹಾಗೂ ಉಪಯೋಗವನ್ನು ತಿಳಿಸಿದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ನಿಯಮಿತವಾಗಿ ಯೋಗ ಅಭ್ಯಾಸ ಮಾಡುವುದರಿಂದ ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಸುವುದು ಎಂದು ಹೇಳಿದರು. ಶೈಕ್ಷಣಿಕ ವಿಭಾಗದ ಡೀನ್ ಡಾ. ಗುರುರಾಜ ಹತ್ತಿ ಸೂರ್ಯ ನಮಸ್ಕಾರದ ಮಹತ್ವವನ್ನು ತಿಳಿಸಿದರು.

ಗದಿಗಪ್ಪ ಎಳ್ಳೂರ್ ಮತ್ತು ಸುನಿಲ್ ಯರಗಟ್ಟಿ ವಿದ್ಯಾರ್ಥಿಗಳಿಗೆ ಸೂರ್ಯ ನಮಸ್ಕಾರ, ಪದ್ಮಾಸನ, ಸರ್ವಾಂಗಾಸನದ ತರಬೇತಿ ನೀಡಿದರು. ವಿದ್ಯಾರ್ಥಿಗಳಿಗೆ ಯೋಗಭ್ಯಾಸದ ಮಹತ್ವ ತಿಳಿಸಿ, ತರಬೇತಿ ನೀಡಿದ ವಿ ಡಿ ಐ ಟಿ ಮಹಾವಿದ್ಯಾಲಯಕ್ಕೆ ತಮ್ಮ ಶಾಲೆಯು ಆಭಾರಿಯಾಗಿದೆ ಎಂದು ಕೆಸರೊಳ್ಳಿ ಶಾಲೆಯ ಮುಖ್ಯೋಪಾಧ್ಯಾಪಕಿ ಪ್ರವೀಣಾ ಪಟ್ಟಣ–ಕರ್ ಹೇಳಿದರು. ಶಾಲಾ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಹಾಗೂ ಸೃಜನಶೀಲತೆಯ ಅನಾವರಣಕ್ಕೆ ಅಜಗಾವ್ ಮತ್ತು ಕೆಸರೊಳ್ಳಿಯ ಶಾಲಾ ವಿದ್ಯಾರ್ಥಿಗಳಿಗೆ 400ಕ್ಕೂ ಅಧಿಕ ಡ್ರಾಯಿಂಗ್ ಶೀಟ್‌ಗಳನ್ನು ಮಹಾವಿದ್ಯಾಲಯದ ವತಿಯಿಂದ ಇದೇ ಸಂದರ್ಭದಲ್ಲಿ ವಿತರಿಸಲಾಯಿತು. ಹಿರಿಯ ಪ್ರಾಥಮಿಕ ಶಾಲೆ ಹಾವಗಿ, ಕೆರವಾಡ ಮತ್ತು ಮುರ್ಕವಾಡದ ಚೈತನ್ಯ ವಿದ್ಯಾಲಯದ ಮಕ್ಕಳಿಗೆ ಮುಂಬರುವ ದಿನಗಳಲ್ಲಿ ಯೋಗ ತರಬೇತಿ ಮತ್ತು ಡ್ರಾಯಿಂಗ್ ಶೀಟ್ ಗಳನ್ನು ಮಹಾವಿದ್ಯಾಲಯವು ವಿತರಿಸಲಿದೆ. ಈ ಕಾರ್ಯಕ್ರಮವನ್ನು ಉನ್ನತ ಭಾರತ ಅಭಿಯಾನದ ಸಂಚಾಲಕ ಪ್ರೊ. ರಾಕೇಶ್ ಪಾಟೀಲ್ ಮತ್ತು ಡಾ. ಶಂಕರ್ ಬಡಿಗೇರ್ ಸಂಯೋಜಿಸಿದ್ದರು.

ಶಾಲಾ ವಿದ್ಯಾರ್ಥಿಗಳಲ್ಲಿ ಯೋಗಭ್ಯಾಸದ ಅರಿವು ಮೂಡಿಸಿ, ಅವರ ಕಲಿಕಾ ಸಾಮರ್ಥ್ಯವನ್ನು ಅಧಿಕಗೊಳಿಸಲು ಮಹಾವಿದ್ಯಾಲಯವು ಈ ಉಪಕ್ರಮವನ್ನು ಕೈಗೊಂಡಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಲಾ ವಿದ್ಯಾರ್ಥಿಗಳಿಗೆ ಯೋಗ ತರಬೇತಿ



ಹಳಿಯಾಳ: ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪಟ್ಟಣದ ಕೆ ಎಲ್ ಎಸ್ ವಿ ಡಿ ಐ ಟಿ ಮಹಾವಿದ್ಯಾಲಯವು ಪ್ರಾಥಮಿಕ ಶಾಲಾ ಮಕ್ಕಳಿಗೆ ಯೋಗಭ್ಯಾಸದ ಮಹತ್ವ ತಿಳಿಸುವ ಮತ್ತು ವಿವಿಧ ಆಸನಗಳ ತರಬೇತಿ ಕಾರ್ಯಕ್ರಮವನ್ನು ಜೂನ್ 18ರಂದು ಹಮ್ಮಿಕೊಂಡಿತ್ತು. ಹಳಿಯಾಳ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಾದ ಅಜಗಾಂವ್ ಮತ್ತು ಕೆಸರೊಳ್ಳಿ ವಿದ್ಯಾರ್ಥಿಗಳಿಗೆ ಯೋಗಾಭ್ಯಾಸದ ಮಹತ್ವ ಹಾಗೂ ಉಪಯೋಗವನ್ನು ತಿಳಿಸಿದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ನಿಯಮಿತವಾಗಿ ಯೋಗ ಅಭ್ಯಾಸ ಮಾಡುವುದರಿಂದ ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಸುವುದು ಎಂದು ಹೇಳಿದರು. ಶೈಕ್ಷಣಿಕ ವಿಭಾಗದ ಡೀನ್ ಡಾ. ಗುರುರಾಜ ಹತ್ತಿ ಸೂರ್ಯ ನಮಸ್ಕಾರದ ಮಹತ್ವವನ್ನು ತಿಳಿಸಿದರು.

ಗದಿಗಪ್ಪ ಎಳ್ಳುರ್ ಮತ್ತು ಸುನಿಲ್ ಯರಗಟ್ಟಿ ವಿದ್ಯಾರ್ಥಿಗಳಿಗೆ ಸೂರ್ಯ ನಮಸ್ಕಾರ, ಪದ್ಮಾಸನ, ಸರ್ವಾಂಗಾಸನದ ತರಬೇತಿ ನೀಡಿದರು.

ವಿದ್ಯಾರ್ಥಿಗಳಿಗೆ ಯೋಗಭ್ಯಾಸದ ಮಹತ್ವ ತಿಳಿಸಿ, ತರಬೇತಿ ನೀಡಿದ ವಿ ಡಿ ಐ ಟಿ ಮಹಾವಿದ್ಯಾಲಯಕ್ಕೆ ತಮ್ಮ ಶಾಲೆಯು ಆಭಾರಿಯಾಗಿದೆ ಎಂದು ಕೆಸರೊಳ್ಳಿ ಶಾಲೆಯ ಮುಖ್ಯೋಪಾಧ್ಯಾಪಕಿ ಪ್ರವೀಣಾ ಪಟ್ಟಣಕರ್ ಹೇಳಿದರು
.

ಶಾಲಾ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಹಾಗೂ ಸೃಜನಶೀಲತೆಯ ಅನಾವರಣಕ್ಕೆ ಅಜಗಾವ್ ಮತ್ತು ಕೆಸರೊಳ್ಳಿಯ ಶಾಲಾ ವಿದ್ಯಾರ್ಥಿಗಳಿಗೆ 400ಕ್ಕೂ ಅಧಿಕ ಡ್ರಾಯಿಂಗ್ ಶೀಟ್ ಗಳನ್ನು ಮಹಾವಿದ್ಯಾಲಯದ ವತಿಯಿಂದ ಇದೇ ಸಂದರ್ಭದಲ್ಲಿ ವಿತರಿಸಲಾಯಿತು.

ಹಿರಿಯ ಪ್ರಾಥಮಿಕ ಶಾಲೆ ಹಾವಗಿ, ಕೆರವಾಡ ಮತ್ತು ಮುರ್ಕವಾಡದ ಚೈತನ್ಯ ವಿದ್ಯಾಲಯದ ಮಕ್ಕಳಿಗೆ ಮುಂಬರುವ ದಿನಗಳಲ್ಲಿ ಯೋಗ ತರಬೇತಿ ಮತ್ತು ಡ್ರಾಯಿಂಗ್ ಶೀಟ್ ಗಳನ್ನು ಮಹಾವಿದ್ಯಾಲಯವು ವಿತರಿಸಲಿದೆ.

ಈ ಕಾರ್ಯಕ್ರಮವನ್ನು ಉನ್ನತ ಭಾರತ ಅಭಿಯಾನದ ಸಂಚಾಲಕ ಪ್ರೊ, ರಾಕೇಶ್ ಪಾಟೀಲ್ ಮತ್ತು ಡಾ. ಶಂಕರ್ ಬಡಿಗೇರ್ ಸಂಯೋಜಿಸಿದ್ದರು.

ಶಾಲಾ ವಿದ್ಯಾರ್ಥಿಗಳಲ್ಲಿ ಯೋಗಭ್ಯಾಸದ ಅರಿವು ಮೂಡಿಸಿ , ಅವರ ಕಲಿಕಾ ಸಾಮರ್ಥ್ಯವನ್ನು ಅಧಿಕಗೊಳಿಸಲು ಮಹಾವಿದ್ಯಾಲಯವು ಈ ಉಪಕ್ರಮವನ್ನು ಕೈಗೊಂಡಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


Powered By KhushiHost.In | 9060329333